# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1


Vol.No.01 | Issue. 233 | Pages. 2 | Date: 27-07-2025, SUNDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 233 - ಪುಟಗಳು : 2 - 27 ಜುಲೈ 2025 ಭಾನುವಾರ Ph: 8762954248 ದರ : ₹1


# ಎರಡು ವರ್ಷದಲ್ಲಿ ಎತ್ತಿನಹೊಳೆ ಪೂರ್ಣ

## ಅರಸೀಕೆರೆಯಲ್ಲಿ ಸಿಎಂ ವಾಗ್ದಾನ | ಅಭಿವೃದ್ಧಿಗೆ ಹಣದ ಕೊರತೆಯಿಲ್ಲ









ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಬಯಲು ಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಕಲ್ಪಿಸುವ ಉದ್ದೇಶದಿಂದ ಕೈಗೊಂಡಿರುವ ಎತ್ತಿನಹೊಳೆ ಯೋಜನೆ ಕಾಮಗಾರಿಯನ್ನು ಮುಂದಿನ 2 ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ತಾಲ್ಲೂಕು ಕ್ರೀಡಾಂಗಣದಲ್ಲಿ ಶನಿವಾರ ಜಿಲ್ಲಾಡಳಿತದಿಂದ ಹಮ್ಮಿಕೊಂಡಿದ್ದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ, ಲೋಕಾರ್ಪಣೆ ಹಾಗೂ ಫಲಾನುಭವಿಗಳಿಗೆ ಸವಲತ್ತು ವಿತರಣೆ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು,

ಹೆಚ್.ಡಿ. ಕುಮಾರಸ್ವಾಮಿ ಎತ್ತಿನಹೊಳೆ ಯೋಜನೆ ಸಾಧ್ಯವಿಲ್ಲ ಎಂದಿದ್ದರು. ಮೊದಲ ಹಂತದ ಕೆಲಸ ಮುಗಿಸಿ 2ನೇ ಹಂತದ ಕೆಲಸ ಶುರು ಮಾಡಿದ್ದೇವೆ. 2 ವರ್ಷದಲ್ಲಿ ಯೋಜನೆ ಮುಗಿಸಿ 7 ಜಿಲ್ಲೆಗಳಿಗೆ ನೀರು ಕೊಡುತ್ತೇವೆ. ಎತ್ತಿನಹೊಳೆ ಯೋಜನೆ ಮುಖ್ಯವಾಗಿ ಕುಡಿಯುವ ನೀರಿನ ಯೋಜನೆ. 24 ಟಿಎಂಸಿಯಲ್ಲಿ 10 ಟಿಎಂಸಿ ಕೆರೆಗಳಿಗೆ, 14 ಟಿಎಂಸಿ ಕುಡಿಯಲು ಕೊಡುತ್ತೇವೆ. ಮೊದಲು

> ತೆಂಗು ಬೆಳೆಗೆ ರೋಗ ತಗುಲಿದೆ ಎಂದು ಶಾಸಕ ಶಿವಲಿಂಗೇಗೌಡ ಗಮನಕ್ಕೆ ತಂದಿದ್ದಾರೆ. ಎಷ್ಟೇ ಹಣ ಖರ್ಚಾದರೂ ಬೆಳೆ ಉಳಿಸುವ ಕೆಲಸ ಮಾಡುತ್ತೇವೆ. ಮುಂದಿನ ಚುನಾವಣೆಯಲ್ಲಿ ಹಾಸನದ ಏಳು ಕ್ಷೇತ್ರ ಗೆಲ್ಲಿಸುವ ಹೊಣೆ ಎಲ್ಲರದ್ದಾಗಿದೆ.
>
> – ಸಿದ್ದರಾಮಯ್ಯ, ಮುಖ್ಯಮಂತ್ರಿ

ಕುಡಿಯಲು ನೀರು ಕೊಡೋಣ, ಆ ಮೇಲೆ 520 ಕೆರೆ ತುಂಬಿಸುವ ಕೆಲಸ ಮಾಡುತ್ತೇವೆ ಎಂದರು.

### ತಲಾ ಆದಾಯ ವೃದ್ಧಿ

ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ತಲಾ ಆದಾಯ ದೇಶದಲ್ಲೇ ನಂ.1 ಆಗಿದೆ. ಗ್ಯಾರಂಟಿಗಳಿಂದ ಅಭಿವೃದ್ಧಿ ಕಾರ್ಯಗಳು ಕುಂಟಿತವಾಗಿಲ್ಲ, ಆಗೋದು ಇಲ್ಲ ಎಂದರು.

ತಲಾ ಆದಾಯ ಹೆಚ್ಚಳಕ್ಕೆ ಜನರ ಕೊಳ್ಳುವ ಶಕ್ತಿ ಹೆಚ್ಚಾಗಿರುವುದು ಕಾರಣ. ಕೊಳ್ಳುವ ಶಕ್ತಿ ಹೆಚ್ಚಾಗಲು ನಮ್ಮ ಗ್ಯಾರಂಟಿ ಯೋಜನೆಗಳು ಪ್ರಮುಖ ಕಾರಣ. ಬಿಜೆಪಿಯವರಿಗೆ ಆರ್ಥಿಕತೆ ಅರ್ಥ ಆಗುವುದಿಲ್ಲ ಎಂದು ಕುಟುಕಿದರು.

ಬಿಜೆಪಿಯವರು ರಾಜ್ಯ ಸರ್ಕಾರದ ಬಳಿ ಅಭಿವೃದ್ಧಿಗೆ ಹಣ ಇಲ್ಲವೆಂದು ಸುಳ್ಳು, ಅಪಪ್ರಚಾರ ಮಾಡುತ್ತಿದ್ದಾರೆ.

ರಾಜಕೀಯ ಪ್ರೇರಿತ ಸುಳ್ಳುಗಳನ್ನು ಹೇಳಿ ರಾಜ್ಯದ ಜನರ ದಾರಿ ತಪ್ಪಿಸುವ ಯತ್ನ ಮಾಡಿದರೂ ರಾಜ್ಯದ ಜನತೆ ಯಾಮಾರುವುದಿಲ್ಲ. ಸರ್ಕಾರದ ಸಾಧನಾ ಸಮಾವೇಶದಲ್ಲಿ ಲಕ್ಷ ಲಕ್ಷ ಜನ ಫಲಾನುಭವಿಗಳು ಸೇರಿ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತಿದ್ದಾರೆ. ಇದು ನುಡಿದಂತೆ ನಡೆದ ನಮ್ಮ ಸರ್ಕಾರದ ಸಾಧನೆ. ನಾವು ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ 1.20 ಲಕ್ಷ ಕೋಟಿರೂ. ಖರ್ಚು ಮಾಡುವುದರ ಜೊತೆಗೆ ಗ್ಯಾರಂಟಿ ಯೋಜನೆಗಳಿಗೆ 56 ಸಾವಿರ ಕೋಟಿ ರೂ. ಖರ್ಚು ಮಾಡಿ ಜನರ ಮನೆ ಬಾಗಿಲಿಗೆ ಅಭಿವೃದ್ಧಿ ಕಾರ್ಯಗಳನ್ನು ತಲುಪಿಸಿದ್ದೇವೆ ಎಂದು ವಿವರಿಸಿದರು.

ಕಳೆದ ಚುನಾವಣೆಯಲ್ಲಿ ರಾಜ್ಯದಲ್ಲಿ 136 ಸ್ಥಾನ ಗೆಲ್ಲಿಸಿದ್ದೀರಾ, 2028ರಲ್ಲೂ ಇದೇ ರೀತಿ ಆಶೀರ್ವಾದ ಮಾಡಬೇಕು. ಕಾಂಗ್ರೆಸ್ ಮಾತ್ರ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಸರ್ಕಾರ. ನಾವು ಕೊಟ್ಟ ಭರವಸೆ ಈಡೇರಿಸುತ್ತೇವೆ, ಬಿಜೆಪಿಯವರು ಶೇ.10ರಷ್ಟನ್ನೂ ಈಡೇರಿಸಿಲ್ಲ. ಅವರು ಯಾವತ್ತೂ ಜನರ ಆಶೀರ್ವಾದ ಪಡೆದು ಅಧಿಕಾರಕ್ಕೆ ಬಂದಿಲ್ಲ ಎಂದು ವಾಗ್ದಾಳಿ ನಡೆಸಿದರು.

ಶಿವಲಿಂಗೇಗೌಡ ಅವರು, ಅರಸೀಕೆರೆ ವಿಧಾನಸಭಾ ಕ್ಷೇತ್ರದ ಜನಪರ ಅಭಿವೃದ್ಧಿ ಕೆಲಸ ಮಾಡುವುದು ಮಾತ್ರವಲ್ಲದೇ, ವಿಧಾನಸಭೆ ಅಧಿವೇಶನದಲ್ಲಿ ಪಕ್ಷ ಮತ್ತು ಸರ್ಕಾರದ ಜನಪರ ಕಾರ್ಯಗಳನ್ನು ಸಮರ್ಥವಾಗಿ ಮಂಡಿಸುವುದರಲ್ಲೂ ಮುಂದಿದ್ದಾರೆ. ನಾಲ್ಕು ಬಾರಿ ಶಾಸಕರಾಗಿರುವ ಅವರು ಮುಂದಿನ ಚುನಾವಣೆಯಲ್ಲೂ ಗೆಲ್ಲುವುದು ಶತಸಿದ್ಧ ಎಂದರು.

ಹಾಸನ ಮಹಾನಗರ ಪಾಲಿಕೆಗೆ ಮೂರು ವರ್ಷಗಳ ಕಾಲ ಹೆಚ್ಚುವರಿ ಹಣ ಬಿಡುಗಡೆ ಮಾಡುವುದಿಲ್ಲ ಎಂಬ ಅಧಿಕಾರಿಗಳು ಹೊರಡಿಸಿರುವ ಆದೇಶ ನನ್ನ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

## ಗ್ಯಾರಂಟಿ ಅನುಷ್ಠಾನ ಜೊತೆಗೆ ಸುಭದ್ರ ಆಡಳಿತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಚುನಾವಣಾ ಪೂರ್ವದಲ್ಲಿ ಘೋಷಿಸಿದಂತೆ ಪಂಚ ಗ್ಯಾರಂಟಿಗಳನ್ನು ಜಿಲ್ಲೆಯಲ್ಲಿ ಉತ್ತಮ ರೀತಿಯಲ್ಲಿ ಅನುಷ್ಠಾನ ಮಾಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ತಾಲ್ಲೂಕು ಕ್ರೀಡಾಂಗಣದಲ್ಲಿ ಶನಿವಾರ ಜಿಲ್ಲಾಡಳಿತದಿಂದ ಹಮ್ಮಿಕೊಂಡಿದ್ದ ವಿವಿಧ ಕಾಮಗಾರಿಗಳ ಉದ್ಘಾಟನೆ-ಶಂಕುಸ್ಥಾಪನೆ ಹಾಗೂ ಫಲಾನುಭವಿಗಳ ಸಮಾವೇಶದಲ್ಲಿ ಮಾತನಾಡಿ, ಐದು ಗ್ಯಾರಂಟಿ ಜಾರಿಯಲ್ಲೂ ಉತ್ತಮ ಸಾಧನೆಯಾಗಿದೆ. ಇಡೀ ರಾಜ್ಯದಲ್ಲಿ ಯಾರೂ ಹಸಿವಿನಿಂದ ನರಳಬಾರದು. ಸಿದ್ದರಾಮಯ್ಯ ಅವರು ಜಾರಿ ಮಾಡಿರುವ ಅನ್ನಭಾಗ್ಯ ಯೋಜನೆಗೆ ಉತ್ತಮ ಸ್ಪಂದನೆ ಸಿಕ್ಕಿದೆ, ಪ್ರಗತಿಯೂ ಆಗಿವೆ ಎಂದರು.

ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಹಣ ಒದಗಿಸುವ ಶಕ್ತಿ, ಸಾಮರ್ಥ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗಿದೆ. ಸರ್ಕಾರದ ಬಳಿ ಹಣ ಇಲ್ಲ ಎಂಬುದು ಸುಳ್ಳು, ಇಲ್ಲದಿದ್ದರೆ ಇಷ್ಟೊಂದು ಅಭಿವೃದ್ಧಿ ಕಾರ್ಯ ಮಾಡಲಾಗುತ್ತಿತ್ತೇ ಎಂದು ಪ್ರಶ್ನಿಸಿದರು.

ಸರ್ಕಾರದಲ್ಲಿ ಹಣಕ್ಕೆ ಕೊರತೆ ಇಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು




### ಎತ್ತಿನಹೊಳೆ ನೀರಿಗೆ ಬೇಡಿಕೆಯಿಟ್ಟ ಕೆಎಂಶಿ

ಶಾಸಕ ಕೆ.ಎಂ. ಶಿವಲಿಂಗೇಗೌಡ ಮಾತನಾಡಿ, ಎತ್ತಿನಹೊಳೆ ನೀರು ಎಲ್ಲೆಲ್ಲೋ ಹರಿದು ಹೋಗುತ್ತಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಆಪತ್ಬಾಂಧವರಾಗಿ ನನ್ನ ಕ್ಷೇತ್ರದಲ್ಲಿ ಕುಡಿಯಲು, ಕೆರೆಗಳನ್ನು ತುಂಬಿಸಲು ಎತ್ತಿನಹೊಳೆ ನೀರು ಕೊಡಿ ಎಂದು ಮನವಿ ಮಾಡಿದರು.

ನಿಮ್ಮಿಬ್ಬರಿಗೂ ಕೈಮುಗಿದು ಬೇಡುತ್ತೇನೆ, ಇಬ್ಬರು ಸೇರಿ ನನ್ನ ಕ್ಷೇತ್ರಕ್ಕೆ ಅನುದಾನ ನೀಡಿ, ನೀರಾವರಿ ಸೌಲಭ್ಯ ಕಲ್ಪಿಸಿದರೆ ನಿಮ್ಮ ಋಣ ಮರೆಯೋದಿಲ್ಲ. ನಾವು ಬರಗಾಲ ಪ್ರದೇಶದವರು ಎಂದರು.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ನನ್ನ ಕ್ಷೇತ್ರಕ್ಕೆ ಸಾಕಷ್ಟು ಕೆಲಸ ಮಾಡಿಕೊಟ್ಟಿದ್ದಾರೆ. ಆದರೆ ಎತ್ತಿನಹೊಳೆ ನೀರಿನ ಕೊರಗು ಕಾಡುತ್ತಿದೆ. ಅದೊಂದು ಕೊರತೆ ಹೋಗಲಾಡಿಸಿ ಎಂದರು.

ಹಣಕಾಸು ಸಚಿವರಾಗಿ ಸಾಕಷ್ಟು ಅನುಭವ ಹೊಂದಿದ್ದಾರೆ. ಹೆಚ್ಚು ಆಯವ್ಯಯ ಮಂಡನೆ ಮಾಡಿದ ಅನುಭವ ಇದೆ. ಅದರ ಆಧಾರದ ಮೇಲೆ ಉತ್ತಮ ಅಭಿವೃದ್ಧಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ರಾಜ್ಯದಲ್ಲಿ ಅಭಿವೃದ್ಧಿಗೆ ಹಣಕಾಸು ಕೊರತೆ ಇಲ್ಲ, ಆದರೂ ವಿರೋಧ ಪಕ್ಷಗಳು ಸುಖಾಸುಮ್ಮನೆ ಆರೋಪ ಮಾಡುತ್ತಿವೆ. ಹಾಸನ ಸಭೆಯನ್ನು ಮಹಾನಗರಪಾಲಿಕೆಯಾಗಿ ಮೇಲ್ದರ್ಜೆಗೇರಿಸಿದ ಕೀರ್ತಿ ನಮ್ಮ ಸರ್ಕಾರದ್ದು, ಈ ಹೆಗ್ಗಳಿಕೆ ಸಿದ್ದರಾಮಯ್ಯ ಅವರಿಗೆ ಸಲ್ಲಬೇಕು. ಹಾಸನ ನಗರದಲ್ಲಿ ನನೆಗುದಿಗೆ ಬಿದ್ದಿದ್ದ ಮತ್ತೊಂದು ಬದಿಯ ರೈಲ್ವೆ ಮೇಲ್ಸೇತುವೆ ಕಾಮಗಾರಿಗೆ 21 ಕೋಟಿ ಹಣ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪುನಾರಂಭ ಆಗಿದೆ. ಇದೂ ನಮ್ಮ ಸರ್ಕಾರದ ಕೊಡುಗೆ ಎಂದರು.

ಹಾಸನಾಂಬ ಜಾತ್ರೆಯನ್ನು ಕಳೆದ ಬಾರಿ ಸುವ್ಯವಸ್ಥಿತವಾಗಿ ನಡೆಸಿದ ಪರಿಣಾಮ 6 ಲಕ್ಷ ಭಕ್ತರು, 3 ಕೋಟಿ ಆದಾಯ ಇದ್ದದನ್ನು 20.34 ಕೋಟಿ ಭಕ್ತರ ಆಗಮನ ಹಾಗೆಯೇ 12.63 ಕೋಟಿ ಕಾಣಿಕೆ ರೂಪದ ಆದಾಯ ಹೆಚ್ಚಾಗಲೂ ಸರ್ಕಾರ, ಜಿಲ್ಲಾಡಳಿತ ಕಾರಣ. ಪೋಡಿ, ಪೌತಿಖಾತೆ ಹಾಗೂ ನ್ಯಾಯಾಲಯಗಳಲ್ಲಿ ಹಳೆಯ ಪ್ರಕರಣ ಇತ್ಯರ್ಥ ಮಾಡುವುದಲ್ಲಿ ರಾಜ್ಯದಲ್ಲೇ ಹಾಸನ ಜಿಲ್ಲೆ ಮುಂಚೂಣಿಯಲ್ಲಿದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ಸಂಸದ ಶ್ರೇಯಸ್ ಪಟೇಲ್ ಮಾತನಾಡಿದರು. ತರಿಕೆರೆ ಶಾಸಕ ಶ್ರೀನಿವಾಸ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸೇರಿ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

## ಜಾತಿ ಗಣತಿಗೆ ಕರ್ನಾಟಕ ಪ್ರೇರಣೆ: ಡಿಸಿಎಂ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಮೈಸೂರು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪಾಪ ಹೊಸದಾಗಿ ಎಂಪಿ ಆಗಿದ್ದಾರೆ. ಅನುಭವ ಪಡೆದು ಮಾತನಾಡಲಿ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿ ಶಿವಕುಮಾರ್ ತಿರುಗೇಟು ನೀಡಿದರು.

ನಗರದ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರಿಗೆ ರಾಜ್ಯ ಸರ್ಕಾರಕ್ಕೆ ಜಾತಿಗಣತಿ ಮಾಡುವ ಯೋಗ್ಯತೆ ಇಲ್ಲ ಎಂಬ ಮೈಸೂರು ಸಂಸದರ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರು ಮೊದಲ ಬಾರಿಗೆ ಸಂಸತ್ ಸದಸ್ಯರಾಗಿದ್ದು, ಅನುಭವ ಪಡೆದುಕೊಳ್ಳಲಿ ಎಂದು ಹೇಳಿದರು.

ನಾವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವಿಚಾರದಲ್ಲಿ ಗಣತಿ ಮಾಡುತ್ತಿದ್ದೇವೆ, ಹಿಂದೆ ಕೂಡ



ಮಾಡಿದ್ದೆವು. ಆದರೆ ಆ ಬಗ್ಗೆ ಕೆಲವು ಸಂಘ ಸಂಸ್ಥೆಗಳು, ಪ್ರಬಲ ಸಮಾಜಗಳು ಅಪಸ್ವರ ಎತ್ತಿದ್ದರಿಂದ, ಮರುಗಣತಿ ಮಾಡಿ ಎಂದು ಹೇಳಿದ್ದರಿಂದ ಈಗ ಮತ್ತೆ ಅವಕಾಶ ಮಾಡಿಕೊಟ್ಟಿದ್ದೇವೆ ಎಂದರು.

ಯದುವೀರ್ ಅವರು ಇನ್ನೂ ಸ್ವಲ್ಪ ಎಲ್ಲಾ ಕಲಿತುಕೊಳ್ಳಲಿ,

ಪಾಪ ಅವರಿಗಿನ್ನೂ ಅನುಭವ ಇಲ್ಲ, ಕೇಂದ್ರ ಸರ್ಕಾರ ನಮ್ಮನ್ನ

### ಸಿಟ್ಟಾದ ಶಿವಕುಮಾರ್

ಸಿಎಂ-ಡಿಸಿಎಂ ಒಟ್ಟಿಗೇ ಬಂದ ಬಗ್ಗೆ ಕೇಳಿದ್ದಕ್ಕೆ ಅಲ್ಲಾ ರೀ ಸುಮ್ನೆ ಏಕೆ, ನಿಮಗೆ ಬೇರೆ ಕೆಲಸ ಇಲ್ವಾ, ಒಟ್ಟಿಗೆ ಬರದೆ ಬೇರೆ ಬೇರೆ ಬರ್ತಾರಾ, ಎರಡಾಗಲಿ, ನಾಲ್ಕು ಹೆಲಿಕಾಪ್ಟರ್ ಆಗಲಿ, ಅವರು ದೆಹಲಿಯಿಂದ ಬಂದಿದ್ದಾರೆ, ನಾನು ಬೆಂಗಳೂರಿನಿಂದ ಬಂದೆ ಎಂದು ಸಿಡಿಮಿಡಿಗೊಂಡರು.

ನೋಡಿ ಅನೌನ್ಸ್ ಮಾಡಿದೆ ಎಂದು ಕುಟುಕಿದರು.

ನಾವು ನಮ್ಮ ಪಕ್ಷದ ಪ್ರಣಾಳಿಕೆಯಲ್ಲೂ ಹೇಳಿದೆ, ರಾಹುಲ್ ಗಾಂಧಿ ಇಡೀ ದೇಶದಲ್ಲಿ ಮುಂದಾಳತ್ವ ತಗೆದುಕೊಂಡಿದ್ದಾರೆ, ತೆಲಂಗಾಣದಲ್ಲಿ ಈಗಾಗಲೇ ಮಾಡಿದ್ದೇವೆ, ಇಲ್ಲೂ ಮಾಡುತ್ತೇವೆ ಎಂದರು.

ಹಿಂದೆ ಜಾತಿಗಣತಿ ಮಾಡಿ ಹತ್ತು ವರ್ಷ ಆಗಿದೆ, ಅದಕ್ಕೆ ಹೊಸದಾಗಿ ಮಾಡಬೇಕು ಎಂದು ನಾನೇ ಪಕ್ಷದ ಅಧ್ಯಕ್ಷನಾಗಿ, ಜೊತೆಗೆ ಅನೇಕ ಸಚಿವರು ಸೇರಿ ಮುಖ್ಯಮಂತ್ರಿ ಅವರ ಮನವೊಲಿಸಿದೆವು, ನಮ್ಮ ಹೈಕಮಾಂಡ್ ಕೂಡ ಆದೇಶ ನೀಡಿತ್ತು. ಅದರಂತೆ ಹೊಸದಾಗಿ ಗಣತಿ ಆಗುತ್ತಿದೆ ಎಂದು ವಿವರಣೆ ನೀಡಿದರು.

ಮತಗಳ ಕಳ್ಳತನದ ಬಗ್ಗೆ ದಾಖಲೆ ಬಿಡುಗಡೆ ಮಾಡಲಿ ಎಂಬ ಬಿಜೆಪಿಯವರ ಹೇಳಿಕೆಗೆ, ಆಗಲೇ ದೆಹಲಿಯಲ್ಲಿ ಏನೇನು ಬೇಕು ಅದನ್ನು ಕೊಟ್ಟಿದ್ದೇವೆ ಎಂದು ಉತ್ತರಿಸಿದರು.

## ಇಷ್ಟಾರ್ಥ ಸಿದ್ಧಿಗಾಗಿ ಡಿಕೆಶಿ ತಾಳೆಗರಿ ಭವಿಷ್ಯ, ಏಕಾಂಗಿ ಪೂಜೆ

ಹಾಸನ: ಮುಖ್ಯಮಂತ್ರಿ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ದೇವಸ್ಥಾನಗಳ ಭೇಟಿ ಮಾಡುತ್ತಿದ್ದು ಶನಿವಾರ ಸಹ ಅರಸೀಕೆರೆಯ ಜೇನುಕಲ್ ಸಿದ್ದೇಶ್ವರ ಸ್ವಾಮಿ ಹಾಗೂ ಕೋಡಿಮಠಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಕೋಡಿಮಠದಲ್ಲಿ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದ ಡಿ.ಕೆ. ಶಿವಕುಮಾರ್ ಅವರು ಅರ್ಧ ಗಂಟೆಗೂ ಹೆಚ್ಚುಕಾಲ ಶ್ರೀಗಳೊಂದಿಗೆ ಕಾಲ ಕಳೆದರು. ಈ ವೇಳೆ ತಾಳೆಗರಿ ಭವಿಷ್ಯ ಕೇಳಿದರು.

ಜೇನುಕಲ್ ಸಿದ್ದೇಶ್ವರ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದ ಅವರು ಬಾಗಿಲು ಮುಚ್ಚಿ ಇಷ್ಟಾರ್ಥ ಪೂಜೆಗಾಗಿ ಪೂಜೆ ಸಲ್ಲಿಸಿದ್ದು ವಿಶೇಷವಾಗಿತ್ತು. 15 ನಿಮಿಷಕ್ಕೂ ಹೆಚ್ಚು ಕಾಲ ದೇವಾಲಯದ ಒಳಗೆ ಒಬ್ಬರೇ ಪ್ರಾರ್ಥನೆ ಸಲ್ಲಿಸಿದರು. ಉಪಮುಖ್ಯಮಂತ್ರಿ ಪೂಜೆ ಮುಗಿಸಿ ಹೊರಬರುತ್ತಿದ್ದಂತೆ ನೆರೆದಿದ್ದ ಅಪಾರ ಸಂಖ್ಯೆಯ ಕಾರ್ಯಕರ್ತರು ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಂದು ಹರ್ಷೋದ್ಗಾರ ಮೊಳಗಿಸಿದರು. ನಾಲ್ಕು ದಿನಗಳ ಹಿಂದಷ್ಟೇ ಚನ್ನರಾಯಪಟ್ಟಣ ತಾಲ್ಲೂಕಿನ ನವಿಲೆ ನಾಗೇಶ್ವರನಿಗೆ ಪೂಜೆ ಸಲ್ಲಿಸಿದ್ದರು. ಶಿವಕುಮಾರ್ ಅವರ ಟೆಂಪಲ್ ರನ್ ಭಾರೀ ಚರ್ಚೆಗೆ ಗ್ರಾಸವಾಗಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು,



ಎಲ್ಲಿ ಭಕ್ತಿ ಇದೆಯೋ ಅಲ್ಲಿ ಭಗವಂತ ಇದ್ದಾನೆ. ರಾಜ್ಯದಲ್ಲಿ ಒಳ್ಳೆಯ ಮಳೆ, ಬೆಳೆ, ಅಭಿವೃದ್ಧಿ ಕೆಲಸಗಳು ಆಗಿದೆ. ದೇವರ ದರ್ಶನ ಮಾಡುವ ಭಾಗ್ಯ ನನಗೆ ಸಿಕ್ಕಿದೆ ಎಂದರು.

ದೇವಾಲಯ ಬಾಗಿಲು ಮುಚ್ಚಿಸಿ ಪೂಜೆ ಸಲ್ಲಿಸಿದ ಕುರಿತು ಪ್ರಶ್ನೆಗೆ ಉತ್ತರಿಸಿದ ಅವರು, ಅದು ಭಕ್ತ ಮತ್ತು ಭಗವಂತನಿಗೆ ಬಿಟ್ಟ ವಿಚಾರವೆಂದರು.

ನಾನು ಧರ್ಮ, ದೇವರು, ಸಂಸ್ಕೃತಿ, ನಮ್ಮ ಆಚಾರ-ವಿಚಾರಗಳ ಬಗ್ಗೆ ನಂಬಿಕೆ ಇಟ್ಟುಕೊಂಡಿದ್ದೇನೆ. ಯಾವುದೇ ಧರ್ಮದಲ್ಲಾಗಲಿ ಒಂದು ಶಕ್ತಿ ಇದೆ. ಕೆಲವರು ದೇವರನ್ನು ನಂಬುತ್ತಾರೆ ಮತ್ತೆ ಕೆಲವರು ನಂಬುವುದಿಲ್ಲ. ನಾನು ದೈವಭಕ್ತ. ಹಲವು ವರ್ಷಗಳ ಹಿಂದೆ ಕುಟುಂಬ ಸಮೇತ ಕೋಡಿಮಠಕ್ಕೆ ಭೇಟಿ ನೀಡಿದ್ದೆ. ಶ್ರೀಮಠದ ಸ್ವಾಮೀಜಿ ಇಲ್ಲೇ ಇದ್ದಾರೆಂಬುದು ಗೊತ್ತಾದ್ದರಿಂದ ಆಶೀರ್ವಾದ ಪಡೆದಿದ್ದೇನೆ ಎಂದರು.

### ದೊಡ್ಡವರ ಬಗ್ಗೆ ಮಾತಾಡಲ್ಲ

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಅಧಿಕಾರಿಗಳ ಸಭೆ ನಡೆಸಿದ್ದಾರೆ ಎನ್ನುವುದೆಲ್ಲ ಸುಳ್ಳು. ಅವರು ಯಾವ ಅಧಿಕಾರಿಯನ್ನೂ ಭೇಟಿ ಮಾಡಿಲ್ಲ, ಮಾತು ಆಡಿಲ್ಲ. ಏನೇ ತಪ್ಪುಗಳಿದ್ದರೂ ಅಧಿಕಾರಿಗಳು ನಮ್ಮ ಗಮನಕ್ಕೆ ತರುತ್ತಾರೆ. ನಾವು ತಿದ್ದಿಕೊಳ್ಳುತ್ತೇವೆ.

ಸುರ್ಜೇವಾಲಾ ಅಥವಾ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗಲಿ ಅಧಿಕಾರಿಗಳ ಸಂಪರ್ಕಿಸುವ ಅಥವಾ ಕರೆ ಮಾಡುವ ಗೋಜಿಗೆ ಹೋಗುವುದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಸುರ್ಜೇವಾಲಾ ಸಭೆ ಕುರಿತು ಲಘುವಾಗಿ ಮಾತನಾಡಿರುವ ದೊಡವರ ಬಗ್ಗೆ ನಾನು ಮಾತನಾಡುವುದಿಲ್ಲ. ಅದಕ್ಕೆಲ್ಲ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರೇ ಪ್ರತಿಕ್ರಿಯಿಸಿದ ಮೇಲೆ ನಾನೇನು ಉತ್ತರ ಕೊಡುವುದು. ಮುಖ್ಯಮಂತ್ರಿ ಅವರಿಗೆ ನನಗಿಂತ ಹೆಚ್ಚು ಮಾಹಿತಿ ಇದೆ ಎಂದರು.

## ಕಾರ್ಗಿಲ್ ವಿಜಯ ದಿನ: ಹುತಾತ್ಮ ಯೋಧರ ಸ್ಮರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ನಗರ ಸೇರಿದಂತೆ ಜಿಲ್ಲಾದ್ಯಂತ ಶನಿವಾರ ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸಲಾಯಿತು.


ಅರಕಲಗೂಡು ತಾಲ್ಲೂಕಿನ ಅಗ್ರಹಾರ ಗ್ರಾಮದಲ್ಲಿ ಕಾರ್ಗಿಲ್ ಯುದ್ಧದಲ್ಲಿ ಮಡಿದ ವೆಂಕಟ್ ಅವರ ಸಮಾಧಿಗೆ ಗ್ರಾಮ ಪಂಚಾಯಿತಿ ಅಧಿಕಾರಿಗಳು ಗೌರವ ಸಲ್ಲಿಸಿದರು. ಹಾಸನ, ಹೊಳೆನರಸೀಪುರ, ಅರಸೀಕೆರೆ, ಚನ್ನರಾಯಪಟ್ಟಣ ಸೇರಿ ಜಿಲ್ಲಾದ್ಯಂತ ಸೈನಿಕರ ತ್ಯಾಗ ಬಲಿದಾನ ಸ್ಮರಿಸಲಾಯಿತು.

ಹಾಸನದ ಜನರಲ್ ಕಾರ್ಯಪ್ಪ ಪಾರ್ಕ್‌ನಲ್ಲಿ ಹುತಾತ್ಮ ಯೋಧರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದ ಸೇನೆ ಎಲ್ಲಾ ವಿಭಾಗಗಳಲ್ಲಿ ಸಶಕ್ತವಾಗಿದೆ ಎಂಬುದಕ್ಕೆ ಆಪರೇಷನ್ ಸಿಂಧೂರ ಪ್ರತ್ಯಕ್ಷ ಸಾಕ್ಷಿ ಎಂದರು.

ಇಡೀ ವಿಶ್ವವೇ ತಿರುಗಿ ನೋಡುವ ಕೆಲಸವನ್ನು ಭಾರತೀಯ ಸೇನೆ ಆಪರೇಷನ್ ಸಿಂಧೂರ ಮೂಲಕ ಮಾಡಿದೆ. ಜಮ್ಮು-ಕಾಶ್ಮೀರ, ಸಿಯಾಚಿನ್ ಸೇರಿ ವಿವಿಧ ಭಾಗಗಳಲ್ಲಿ ಕೆಲಸ ಮಾಡುವುದು ಸವಾಲಿನ ಕೆಲಸ. ಅಂತಹ ಕಷ್ಟಕರ ಜಾಗದಲ್ಲಿ ಕೂಡ ಕೆಲಸ ಮಾಡಿ ದೇಶದ ರಕ್ಷಣೆಗೆ ಪಣ ತೊಟ್ಟಿರುವ ಸೈನಿಕರ ಕೊಡುಗೆ ಅಪಾರ ಎಂದರು.

ಕಾರ್ಗಿಲ್ ವಿಜಯ ದಿವಸ ಒಂದು ನೆನಪಿನ ದಿನವಾಗಿದೆ. ಯುದ್ಧದಲ್ಲಿ ಜಯಶಾಲಿಗಳಾದ ಸಂತಸ ಒಂದೆಡೆಯಾದರೆ ಇನ್ನೊಂದೆಡೆ ವೀರ ಮರಣರಾದ ಸೈನಿಕರ ಶ್ರಮವನ್ನು ಎಲ್ಲರೂ ಗೌರವಿಸಬೇಕು ಎಂದರು.

ಜಿಲ್ಲೆಯಲ್ಲಿ ಸುಮಾರು ನಾಲ್ಕು ಸಾವಿರಕ್ಕೂ ಅಧಿಕ ಮಾಜಿ ಸೈನಿಕರಿದ್ದು ಈ ಪೈಕಿ ಕೇವಲ



1,800 ಮಾಜಿ ಸೈನಿಕರು ಸಂಘಕ್ಕೆ ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ. ಎಲ್ಲರೂ ಸಂಘದ ಸದಸ್ಯತ್ವ ಪಡೆಯಬೇಕು ಎಂದು ಮನವಿ ಮಾಡಿದರು.

ವಿಜಯ ದಿವಸ್ ಅಂಗವಾಗಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರವನ್ನು ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿದ ಅವರು, ದೇಶದ ಪ್ರತಿಯೊಬ್ಬ ಪ್ರಜೆಯು ರಕ್ತದಾನ ಮಾಡಬೇಕೆಂದು ಹಾಗೂ ರಕ್ತದಾನ ಮಾಡುವುದರಿಂದ ನಮ್ಮ ಆರೋಗ್ಯವು ವೃದ್ಧಿಸುತ್ತದೆಂದು ಹೇಳಿದರು.

ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸೈನಿಕರ ಸಂಘದ ವತಿಯಿಂದ ಗೌರವಧನ ನೀಡಲಾಯಿತು.

**ಹೊಳೆನರಸೀಪುರ ವರದಿ:** ದೇಶ ವಾಸಿಗಳಿಗೆ ಕಾರ್ಗಿಲ್ ವಿಜಯ ದಿವಸ್ ಅತ್ಯಂತ ಮಹತ್ವವಾದುದು ಎಂದು ಮಾಜಿ ಸೈನಿಕ ವಸಂತ್ ದೇವಾಂಗ್ ಹೇಳಿದರು.

ಪಟ್ಟಣದ ಸುಭಾಷ್ ಚೌಕದಲ್ಲಿ ಕಾರ್ಗಿಲ್ ವಿಜಯೋತ್ಸವದಲ್ಲಿ ಮಾತನಾಡಿ, 1999ರಲ್ಲಿ 60 ದಿನ ನಡೆದ ಯುದ್ಧ ಭಾರತದ ಅಸ್ಮಿತೆಯನ್ನು ಕಾಪಾಡಿದೆ. ಇದೇ ಯುದ್ದದಲ್ಲಿ 1400 ಜನರು ಗಾಯಗೊಂಡರು. ಭಾರತೀಯ ಸೇನೆ ನಮ್ಮ ದೇಶದ ಹೆಮ್ಮೆ ಎಂಬುದು ಪದೆ ಪದೇ ಸಾಬೀತಾಗಿದೆ. ಒಂದು ಧ್ಯೇಯಕ್ಕಾಗಿ ಜೀವನವನ್ನೇ ಮುಡುಪಾಗಿಟ್ಟು, ಹೋರಾಡಿ ವೀರ ಮರಣ ಹೊಂದುವವರನ್ನು ಸ್ಮರಿಸುವುದು ಕರ್ತವ್ಯ ಎಂದರು. ಕಾರ್ಗಿಲ್ ವಿಜಯ ಸಂಭ್ರಮಕ್ಕಾಗಿ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ದೇಶ ಭಕ್ತಿಗೀತೆ ಹಾಗೂ ಸಮಾಜದ ಆಂತರೀಕ ಭದ್ರತೆ ಮತ್ತು ಆರೋಗ್ಯ, ಶಿಕ್ಷಣ ಸ್ಥರಗಳಲ್ಲಿ ಸೇವೆ ಸಲ್ಲಿಸಿರುವ ಹಲವರನ್ನು ಸನ್ಮಾನಿಸಲಾಯಿತು.

ಪುರಸಭೆ ಅಧ್ಯಕ್ಷ ಎಚ್.ಕೆ. ಪ್ರಸನ್ನ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಈಶ್ವರ್, ನಿವೃತ್ತ ಯೋಧರಾದ ಚಂದ್ರಕಾಂತ್, ಮಹದೇವಯ್ಯ, ಬಸಪ್ಪ, ರವಿ,



ರಮೇಶ್, ಚನ್ನಕೇಶವ, ನಿಂಗರಾಜು, ಕುಮಾರ್, ಅಂತಾರಾಷ್ಟ್ರೀಯ ಕ್ರೀಡಾಪಟು ವಿಜಯಕುಮಾರಿ, ಸಾಮಾಜಿಕ ಕಾರ್ಯಕರ್ತ ಮುತ್ತುರಾಜ್ ಹಾಜರಿದ್ದರು.

# ಮಹಿಳೆ-ಮಕ್ಕಳ ಆರೋಗ್ಯ ರಕ್ಷಣೆ ಮುಖ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗರ್ಭಿಣಿಯರಿಗೆ ಹಾಗೂ ಮಕ್ಕಳಿಗೆ ಸರ್ಕಾರ ಹಲವು ಸೌಲಭ್ಯ ನೀಡಿದ್ದು, ಇದರೊಟ್ಟಿಗೆ ರೋಟರಿಯಂತಹ ಸಂಘ ಸಂಸ್ಥೆಗಳು ಮತ್ತಷ್ಟು ಅರಿವು ಮೂಡಿಸುವ ಕೆಲಸ ಮಾಡಬೇಕಾದ ಅಗತ್ಯತೆ ಇದೆ ಎಂದು ರೋಟರಿ ಜೋನ್ 9ರ ವಲಯ ಸೇನಾನಿ ಮಮತ ಪಾಟೀಲ್ ಹೇಳಿದರು.




ನಗರದ ದೊಡ್ಡಮಂಡಿಗನಹಳ್ಳಿ ಅಂಗನವಾಡಿ ಕೇಂದ್ರದಲ್ಲಿ ಶನಿವಾರ ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ವತಿಯಿಂದ ಹಮ್ಮಿಕೊಂಡಿದ್ದ ಗರ್ಭಿಣಿಯರು ಹಾಗೂ ಅಂಗನವಾಡಿ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಸ್ತ್ರೀಯರು ತಮ್ಮ ಆರೋಗ್ಯದ ಬಗ್ಗೆ ಎಷ್ಟು ಕಾಳಜಿ ವಹಿಸಿದರು ಸಾಲದು. ಅದರಲ್ಲೂ ತಾಯಿಯಾಗುವಂತಹ ಮೊದಲ ಹಂತದಿಂದ ಮಗು ಜನಿಸಿ ಐದು ವರ್ಷಗಳ ಕಾಲ ಇಬ್ಬರ ಆರೋಗ್ಯದ ಬಗ್ಗೆ ಜಾಗರೂಕತೆಯಿಂದ ಇರಬೇಕು. ಆರೋಗ್ಯ ಇಲಾಖೆಯಲ್ಲಿ ಆಧಾರ ಸ್ತಂಭವಾಗಿ ಕೆಲಸ ಮಾಡುತ್ತಿರುವ ಆಶಾ ಕಾರ್ಯಕರ್ತೆಯರು ಗರ್ಭಿಣಿಯರಿಗೆ ಸರಿಯಾದ ಸಮಯಕ್ಕೆ ಅವರಿಗೆ ಆರೋಗ್ಯದ ಬಗ್ಗೆ ಕಾಳಜಿ ಮೂಡಿಸಿ ಅವರಿಗೆ ಸರ್ಕಾರದಿಂದ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಬೇಕು. ಅಂಗನವಾಡಿಗೆ ಬರುವ ಮಕ್ಕಳಿಗೆ ಅಂಗನವಾಡಿ ಶಿಕ್ಷಕರು ಮಕ್ಕಳಿಗೆ ಆರೋಗ್ಯದಿಂದ ನೋಡಿಕೊಳ್ಳುವ ಮೂಲಕ ಸಮಾಜದಲ್ಲಿ ಅವರನ್ನು ಉತ್ತಮ ವ್ಯಕ್ತಿಗಳನ್ನಾಗಿ ಮಾಡಬೇಕು. ಸ್ತ್ರೀಯರು ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ರೋಟರಿ ಅಂತರಾಷ್ಟ್ರೀಯ ಮಟ್ಟದಲ್ಲಿ ಜಾಗೃತಿ ಮೂಡಿಸುತ್ತಿದ್ದು, ಅದರ ಭಾಗವಾಗಿ ಇಂದು ನಮ್ಮ ಹಾಸನದ ರೋಟರಿ ರಾಯಲ್ ಸಂಸ್ಥೆ ಗರ್ಭಿಣಿಯರು ಹಾಗೂ ಮಕ್ಕಳಿಗೆ ಪೌಷ್ಟಿಕಾಂಶ ಆಹಾರ ಪದಾರ್ಥಗಳನ್ನು ವಿತರಣೆ ಮಾಡುತ್ತಿರುವುದು ಉತ್ತಮ ಕೆಲಸವಾಗಿದೆ ಎಂದರು.

ರೋಟರಿ ಕ್ಲಬ್ ಆಫ್ ಹಾಸನ ರಾಯಲ್‌ನ ಅಧ್ಯಕ್ಷ ಬಿ.ಕೆ. ಗಂಗಾಧರ್ ಮಾತನಾಡಿ, ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ಪೌಷ್ಟಿಕಾಂಶದ ಆಹಾರದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ವಿಶ್ವದಾದ್ಯಂತ ಇಂದು ಅನೇಕ ಸಂಘ ಸಂಸ್ಥೆಗಳು ಮಾಡುತ್ತಿದ್ದು, ರೋಟರಿ ರಾಯಲ್ ಸಂಸ್ಥೆ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ದೊಡ್ಡ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಗರ್ಭಿಣಿ ಹಾಗೂ ಮಕ್ಕಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಲಾಗುವುದು ಎಂದರು.

ಕಾರ್ಯಕ್ರಮಕ್ಕು ಮೊದಲು ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ವತಿಯಿಂದ ನಗರದ ಉದಯಗಿರಿ ಬಡಾವಣೆಯಲ್ಲಿರುವ ಜನರಲ್ ಕಾರ್ಯಪ್ಪ ಉದ್ಯಾನವನದಲ್ಲಿ ನಡೆದ ಕಾರ್ಗಿಲ್ ವಿಜಯ ದಿವಸ್ ಆಚರಣೆಯಲ್ಲಿ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿ ವೀರ ಯೋಧರಿಗೆ ಗೌರವಿಸಿದರು.

ರೋಟರಿ ಕ್ಲಬ್ ಆಫ್ ಹಾಸನ ರಾಯಲ್‌ನ ಕಾರ್ಯದರ್ಶಿ ಪಿ. ರವಿಕುಮಾರ್, ಖಜಾಂಚಿ ಹೆಚ್.ಕೆ. ದಿಲೀಪ್ ಕುಮಾರ್, ಸದಸ್ಯರಾದ ಕೆ.ಸಿ. ನವೀನ್, ಕಿರಣ್‌ರಾಗ್, ಅಂಗನವಾಡಿ ಶಿಕ್ಷಕಿ ಮಮತ, ಸಹಾಯಕಿ ಅಮಯಮ್ಮ, ಆಶಾ ಕಾರ್ಯಕರ್ತೆಯರಾದ ಪಲ್ಲವಿ, ಆಶಾ ಇತರರಿದ್ದರು.

# ಮೆದುಳು ಮಾನವ ದೇಹದ ಅತ್ಯಮೂಲ್ಯ ಅಂಗ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮೆದುಳು ಮಾನವನ ದೇಹದ ಅತ್ಯಮೂಲ್ಯ ಅಂಗ. ಇದರ ಬಗ್ಗೆ ತುಂಬ ಅರಿವು ಅವಶ್ಯಕ. ಮೆದುಳು ಒಂದು ಬಾರಿ ಕಾಯಿಲೆಗೆ ತುತ್ತಾದರೆ ಸರಿ ಮಾಡುವುದು ತುಂಬಾ ಕಷ್ಟ ಎಂದು ಜಿಲ್ಲಾ ಕುಷ್ಠ ರೋಗ ನಿಯಂತ್ರಣಾಧಿಕಾರಿ ಡಾ. ನಾಗೇಶ್ ಆರಾಧ್ಯ ಅವರು ತಿಳಿಸಿದರು.



ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಮೆದುಳಿನ ಆರೋಗ್ಯ ಉಪಕ್ರಮ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಟೈಮ್ಸ್ ಪಿ.ಯು. ಕಾಲೇಜು ವತಿಯಿಂದ ಸತ್ಯಮಂಗಲದ ಟೈಮ್ಸ್ ಪಿ.ಯು. ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಮಕ್ಕಳು ಮೆದುಳಿನ ಆರೋಗ್ಯವನ್ನು ಹೆಚ್ಚಿಸುವ ಆಟಗಳು, ನಿದ್ರೆ, ವ್ಯಾಯಾಮ, ಸಂಗೀತ, ಇವುಗಳನ್ನು ನಿತ್ಯಜೀವನದಲ್ಲಿ ರೂಢಿಸಿಕೊಳ್ಳಿ ಎಂದರಲ್ಲದೆ, ಎಲ್ಲಾ ವಯೋಮಾನದವರಿಗೂ ಮೆದುಳಿನ ಆರೋಗ್ಯ ಎಂಬುದು 2025ರ ಘೋಷ ವಾಕ್ಯ ಎಂದು ತಿಳಿಸಿದರು.

ಕರ್ನಾಟಕ ಮೆದುಳಿನ ಆರೋಗ್ಯ ಉಪಕ್ರಮದ ಜಿಲ್ಲಾ ಸಂಯೋಜಕ ಲತಾಮಣಿ ಮಾತನಾಡಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಜಿಲ್ಲಾಸ್ಪತ್ರೆಯ ಮೊದಲನೆ ಮಹಡಿ, ಕೊಠಡಿ ಸಂಖ್ಯೆ 13ರಲ್ಲಿ ಬ್ರೈನ್ ಹೆಲ್ತ್ ಕ್ಲಿನಿಕ್ ಸ್ಥಾಪಿಸಿದ್ದು, ಪಾರ್ಶ್ವವಾಯು, ಮೂರ್ಛೆ ರೋಗ, ತಲೆ ನೋವು ಮತ್ತು ಮರೆವಿನ ಕಾಯಿಲೆಗಳಿಗೆ ಚಿಕಿತ್ಸೆ ಲಭ್ಯವಿದ್ದು ಪ್ರತಿ ಮಂಗಳವಾರ ಮತ್ತು ಶುಕ್ರವಾರ ನರಶಸ್ತ್ರ ಚಿಕಿತ್ಸಕರು ಲಭ್ಯರಿರುತ್ತಾರೆ. ಈ ವಿಭಾಗದಲ್ಲಿ ಫಿಜಿಯೋಥೆರಪಿ, ಸ್ಪೀಚ್ ಥೆರಪಿ, ಸೈಕೋಥೆರಪಿ ಇಂತಹ ಸೌಲಭ್ಯಗಳು ಉಚಿತವಾಗಿ ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಮೆದುಳಿನ ಆರೋಗ್ಯ ಉಪಕ್ರಮದ ಸ್ಪೀಚ್ ಥೆರಪಿಸ್ಟ್ ಕೆ.ಕೆ. ಮಾನಸ, ಮನೋಚಿಕಿತ್ಸಕಿ ಡಾ. ದೇವಿಕ, ಹಿಮ್ಸ್ ಅಂಗ ರಚನಶಾಸ್ತ್ರ ವಿಭಾಗ ಮುಖ್ಯಸ್ಥ ಡಾ. ಬಿ.ಎಸ್. ಪ್ರಕಾಶ್, ಟೈಮ್ಸ್ ಪಿ.ಯು. ಕಾಲೇಜು ಪ್ರಾಂಶುಪಾಲೆ ಶೈಲಾ ರೈ ಮತ್ತಿತರರಿದ್ದರು.

# ಹಾಲು ಉತ್ಪಾದಕರೊಂದಿಗೆ ಕೃಷಿ ವಿದ್ಯಾರ್ಥಿಗಳ ಸಂವಾದ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾರೆಕೆರೆ ಕೃಷಿ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳು ಕೃಷಿ ಕಾರ್ಯಾನುಭವ ಶಿಬಿರದಲ್ಲಿ ತಾಲ್ಲೂಕಿನ ಹಂಪನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯರೊಂದಿಗೆ ಸಂವಾದ ನಡೆಸಿದರು.



ಹಾಸನ ಹಾಲು ಒಕ್ಕೂಟದ ಉಪ ವ್ಯವಸ್ಥಾಪಕ ಕೆ.ಎಸ್.ಜಗದೀಶ್ ಮಾತನಾಡಿ, ಹಾಲು ಉತ್ಪಾದನೆ ಭಾರತದ ಗ್ರಾಮೀಣ ಆರ್ಥಿಕತೆಯ ಪ್ರಮುಖ ಭಾಗವಾಗಿದೆ. ಆಮೂಲ್ ದೇಶದಲ್ಲಿ ಹಾಲು ಉತ್ಪಾದನೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದರೆ, ಕೆಎಂಎಫ್ ಎರಡನೇ ಸ್ಥಾನದಲ್ಲಿದೆ. ಹೀಗಾಗಿ ರೈತರು ಹೆಚ್ಚಿನ ಹಾಲು ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಾಸನದಲ್ಲಿ ಮೆಗಾ ಡೇರಿ ಸ್ಥಾಪಿಸಲಾಗುತ್ತಿದೆ. ಈ ಮೆಗಾ ಡೇರಿಯು ದಿನಕ್ಕೆ ಸಾವಿರಾರು ಲೀಟರ್ ಹಾಲು ಸಂಗ್ರಹಿಸುವ ಸಾಮರ್ಥ್ಯ ಹೊಂದಿದ್ದು ವಿವಿಧ ಹಾಲು ಉತ್ಪನ್ನಗಳನ್ನು ತಯಾರಿಸಲು ಮತ್ತು ವಿತರಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂವಾದವು ಹಾಲು ಉತ್ಪಾದನೆ ಕ್ಷೇತ್ರದ ನೈಜ ಸ್ಥಿತಿಗತಿಯ ಬಗ್ಗೆ ಸ್ಪಷ್ಟತೆ ನೀಡಿದ್ದು ಕೃಷಿ ವಿದ್ಯಾರ್ಥಿಗಳಿಗೆ ಭವಿಷ್ಯದ ಉದ್ಯಮದ ಅವಕಾಶಗಳ ಬಗ್ಗೆ ಅರಿವು ಮೂಡಿಸಿದೆ. ಇದೊಂದು ಉತ್ತಮ ಉದ್ಯಮ ಸಮಾಲೋಚನೆಯಾಗಿದೆ ಎಂದು ವಿದ್ಯಾರ್ಥಿಗಳು ಅಭಿಪ್ರಾಯಪಟ್ಟರು.


ಹಾಸನ ಹಾಲು ಒಕ್ಕೂಟದ ಪ್ರಧಾನ ವ್ಯವಸ್ಥಾಪಕ ರೂಪೇಶ ಕುಮಾರ್, ನಿರ್ದೇಶಕರಾದ ಅಣ್ಣೇಗೌಡ, ಗೋವಿಂದಶೆಟ್ಟಿ, ಮಂಜೇಗೌಡ, ಸರೋಜಮ್ಮ ಮತ್ತಿತರರು ಉಪಸ್ಥಿತರಿದ್ದರು.

ಶಿಬಿರದ ಮುಂದುವರೆದ ಭಾಗವಾಗಿ ಕೃಷಿ ವಿದ್ಯಾರ್ಥಿಗಳು ರೈತರಿಗೆ ಟ್ರೈಕೋಡರ್ಮಾವನ್ನು ಜೈವಿಕ ಗೊಬ್ಬರವಾಗಿ ಬಳಕೆ ಮಾಡುವ ವಿಧಾನವನ್ನು ತಿಳಿಸಿಕೊಟ್ಟರು. ಟ್ರೈಕೋಡರ್ಮಾ ಒಂದು ಶಿಲೀಂಧ್ರವಾಗಿದ್ದು, ಇದನ್ನು ಜೈವಿಕಗೊಬ್ಬರವಾಗಿ ಬಳಕೆ ಮಾಡುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ. ಗಿಡದ ಬೆಳವಣಿಗೆ, ಪರಿಸರ ಸ್ನೇಹಿ, ಹೆಚ್ಚು ಇಳುವರಿ ಕೂಡ ದೊರೆಯುತ್ತದೆ. ಇದನ್ನು ಬೀಜೋಪಚಾರವಾಗಿ, ಕೊಟ್ಟಿಗೆ ಗೊಬ್ಬರದೊಂದಿಗೆ ಕಲಸಿ ಹಾಕಬಹುದು ಹಾಗು ಹನಿ ನೀರಾವರಿಯೊಂದಿಗೆ ಬಳಸಬಹುದಾಗಿದೆ. ಇದು ಸಾವಯವ ಕೃಷಿಯಲ್ಲಿ ಹೆಚ್ಚು ಬಳಕೆಯಾಗುತ್ತದೆ ಎಂದು ಮನವರಿಕೆ ಮಾಡಿಕೊಟ್ಟರು.

# ವಲಸಿಗರ ಆರೋಗ್ಯ ತಪಾಸಣೆ ಕಡ್ಡಾಯಗೊಳಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಹೊರ ಜಿಲ್ಲೆ ಹಾಗೂ ರಾಜ್ಯಗಳಿಂದ ಬರುವ ವಲಸೆ ಕಾರ್ಮಿಕರಲ್ಲಿ ಮಲೇರಿಯಾ ಪ್ರಕರಣಗಳು ಕಂಡುಬರುತ್ತಿರುವುದರಿಂದ ಕಡ್ಡಾಯವಾಗಿ ತಪಾಸಣೆಗೊಳಿಸಬೇಕು ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಜಿ.ಎಸ್. ನಾಗಪ್ಪ ಹೇಳಿದರು.




ತಾಲ್ಲೂಕು ಆರೋಗ್ಯಾಧಿಕಾರಿ ಕಚೇರಿ ಹಾಸನಾಂಬ ಸಭಾಂಗಣದಲ್ಲಿ ರಾಷ್ಟ್ರೀಯ ಮಲೇರಿಯಾ ಹಾಗೂ ಡೆಂಗ್ಯೂ ವಿರೋಧಿ ಮಾಸಾಚರಣೆ ಅಂಗವಾಗಿ ತಾಲ್ಲೂಕಿನ ಖಾಸಗಿ ವೈದ್ಯರು ಹಾಗೂ ಪ್ರಯೋಗ ಶಾಲಾ ತಂತ್ರಜ್ಞರಿಗೆ ಮತ್ತು ತಾಲ್ಲೂಕಿನ ಎಲ್ಲಾ ವಸತಿ ನಿಲಯಗಳ/ವಸತಿ ಶಾಲೆಗಳ ವಾರ್ಡನ್ ಮತ್ತು ಇತರೆ ಸಿಬ್ಬಂದಿಗೆ ಏರ್ಪಡಿಸಿದ್ದ ಅಡ್ವೊಕೆಸಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಮಲೇರಿಯಾ ದೃಢಪಟ್ಟರೆ ಕ್ರಮಬದ್ಧವಾದ ಚಿಕಿತ್ಸೆ ನೀಡಿದಾಗ ಮಾತ್ರ ಈ ರೋಗವನ್ನು ನಿರ್ಮೂಲನೆ ಮಾಡಬಹುದು. ರೋಗದ ಮುನ್ನೆಚ್ಚರಿಕೆ ಹಾಗೂ ಸೊಳ್ಳೆಗಳ ನಿಯಂತ್ರಣದ ಬಗ್ಗೆ ಸೂಕ್ತ ಗಮನ ಹರಿಸಬೇಕು. ತೀವ್ರ ಚಿಕಿತ್ಸೆ, ಸ್ವಯಂ ರಕ್ಷಣಾ ವಿಧಾನಗಳು ಮತ್ತು ಸ್ಥಳೀಯ ವೈದ್ಯರ ಸಹಕಾರದಿಂದ ಮಲೇರಿಯಾ ಪ್ರಸರಣ ತಪ್ಪಿಸಬಹುದು ಎಂದರು. ಜಿಲ್ಲಾ ಕೀಟತಜ್ಞ ಡಾ. ರಾಜೇಶ್ ಕುಲಕರ್ಣಿ ಮಾತನಾಡಿ, ಡೆಂಗ್ಯೂ ವೈರಸ್‌ನಿಂದ ಬರುವ ರೋಗವಾಗಿದ್ದು, ಇದು ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯಿಂದ ಹರಡುತ್ತದೆ. ಹಗಲು ಹೊತ್ತಿನಲ್ಲಿ ಕಚ್ಚುವ ಸೊಳ್ಳೆಯಾಗಿದೆ. ತೀವ್ರ ಜ್ವರ, ಅತಿಯಾದ ತಲೆ ನೋವು, ಕಣ್ಣುಗುಡ್ಡೆಗಳ ಹಿಂಭಾಗ ನೋವು, ವಾಂತಿ ಹಾಗೂ ವಾಕರಿಕೆ, ಮಾಂಸಖಂಡಗಳ ನೋವು ಈ ರೋಗದ ಲಕ್ಷಣಗಳಾಗಿವೆ.

### ಸ್ವಚ್ಛತೆಗೆ ಆದ್ಯತೆ ನೀಡಬೇಕು

ಹಾಸ್ಟೆಲ್ ವಾರ್ಡನ್‌ಗಳು ಹಾಗೂ ಸಿಬ್ಬಂದಿ ತಮ್ಮ ವ್ಯಾಪ್ತಿಯ ಶಾಲಾ ಕಾಲೇಜುಗಳು ಮತ್ತು ಹಾಸ್ಟೆಲ್ ಒಳಾಂಗಣ ಹಾಗೂ ಹೊರಾಂಗಣಗಳಲ್ಲಿ ನೀರು ಸಂಗ್ರಹಣಾ ತೊಟ್ಟಿ ಬ್ಯಾರಲ್ ಡ್ರಮ್ ಇತ್ಯಾದಿಗಳನ್ನು ವಾರಕೊಮ್ಮೆ ಸ್ವಚ್ಛಗೊಳಿಸಬೇಕು. ಮಕ್ಕಳು ತಪ್ಪದೆ ಸೊಳ್ಳೆ ಪರದೆ ಬಳಸಬೇಕು. ಸ್ಥಳೀಯ ಪಂಚಾಯಿತಿ ಸಹಕಾರದೊಂದಿಗೆ ಸೊಳ್ಳೆಗಳಿಂದ ಹರಡುವ ರೋಗಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕು ಎಂದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಜಿ.ಎಸ್. ಸತೀಶ್, ವೈದ್ಯರಾದ ಡಾ. ಡಿ.ಆರ್. ಗಂಗಾಧರ್, ಡಾ. ಗಿರೀಶ್ ಬಸಪ್ಪ, ಜಿಲ್ಲಾ ಮೇಲ್ವಿಚಾರಕ ರಾಮಪ್ಪ ಕೋಳಿ, ನಾಗರಾಜು, ತಾಲ್ಲೂಕು ಮೇಲ್ವಿಚಾರಕ ಸಿ.ಆರ್. ಮೋಹನ್, ಬಿ.ಎಸ್. ಸತೀಶ್ ಇತರರಿದ್ದರು.

# ಕಾಂಕ್ರಿಟ್ ಮಿಕ್ಸಿಂಗ್ ಮಷಿನ್‌ಗೆ ಸಿಲುಕಿ ವೃದ್ಧೆ ಸಾವು

ಹಾಸನ: ನಗರದ ರಾಜಘಟ್ಟದಲ್ಲಿ ನಿರ್ಮಾಣವಾಗುತ್ತಿರುವ ಲೇಔಟ್‌ನಲ್ಲಿ ಚರಂಡಿ ಕೆಲಸ ಮಾಡುತ್ತಿದ್ದಾಗ ಕಾಂಕ್ರಿಟ್ ಮಿಕ್ಸಿಂಗ್ ಮಷಿನ್‌ಗೆ ಸಿಲುಕಿ ವೃದ್ಧೆ ಮೃತಪಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆ ಮೇದೇಹಳ್ಳಿ ಗ್ರಾಮದ ಹನುಮಕ್ಕ (76) ಮೃತರು. ಜು. 24ರಂದು ಜಲ್ಲಿ ತುಂಬಿರುವ ಬಾಂಡಲಿಯನ್ನು ಮಿಕ್ಸಿಂಗ್ ಮಷಿನ್‌ಗೆ ಹಾಕುತ್ತಿದ್ದಾಗ ಕಾರ್ಮಿಕ ಕೊಲ್ಲಪ್ಪ ಕಾಂಕ್ರಿಟ್ ಮಿಷನ್ ಅನ್ನು ನಿಧಾನ ಮಾಡದೆ ಇದ್ದಾಗ ಹನುಮಕ್ಕ ಅವರ ಸೀರೆಯ ಸೆರಗು ಮಷಿನ್‌ಗೆ ಸಿಲುಕಿ ಸುತ್ತಿಕೊಂಡಿದೆ. ಸ್ಥಳದಲ್ಲಿದ್ದ ಎಲ್ಲರೂ ಜೋರಾಗಿ ಕಿರುಚಿದಾಗ ಮಷಿನ್ ನಿಲ್ಲಿಸಲಾಗಿದೆ. ಗಂಭೀರ ಗಾಯಗೊಂಡಿದ್ದ ಹನುಮಕ್ಕ ಅವರಿಗೆ ಹಿಮ್ಸ್‌ನಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಮೃತಪಟ್ಟಿದ್ದಾರೆ. ಗುತ್ತಿಗೆದಾರ ರಂಗಸ್ವಾಮಿ, ಮೇಸ್ತ್ರಿ ಶ್ರೀನಿವಾಸ ಸುರಕ್ಷತಾ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದರಿಂದ ಅವಘಡ ಸಂಭವಿಸಿದ್ದು ಅವರ ವಿರುದ್ಧ ಕ್ರಮ ಜರುಗಿಸಬೇಕೆಂದು ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

# ಬೈಕ್ ಡಿಕ್ಕಿ : ವ್ಯಕ್ತಿ ಸಾವು

ಅರಕಲಗೂಡು : ಎರಡು ಬೈಕ್‌ಗಳ ಮುಖಾಮುಖಿ ಡಿಕ್ಕಿಯಲ್ಲಿ ಒಬ್ಬರು ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹರದೂರು ಸಮೀಪ ನಡೆದಿದೆ.

ಹುಲ್ಲಂಗಾಲ ಗ್ರಾಮದ ನಿಂಗರಾಜು (50) ಮೃತರು. ಶುಕ್ರವಾರ ಮಧ್ಯಾಹ್ನ 1 ಗಂಟೆ ಸಮಯದಲ್ಲಿ ನಿಂಗರಾಜು ಬೈಕ್‌ನಲ್ಲಿ ಬರುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಬೈಕ್ ಸವಾರ ಡಿಕ್ಕಿ ಮಾಡಿದ್ದಾನೆ. ಬೈಕ್ ಸಮೇತ ಕೆಳಗೆ ಬಿದ್ದಿದ್ದರಿಂದ ಗಂಭೀರ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟಿದ್ದಾರೆ. ಅರಕಲಗೂಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜುಲೈ-27

**1980:** ಕರ್ನಾಟಕದ ಗೋಕಾಕ್ ಚಳವಳಿ ಉದಯ, ಕನ್ನಡ ಭಾಷಾ ಹಕ್ಕಿಗಾಗಿ ನಡೆದ ಪ್ರಮುಖವಾದ ಗೋಕಾಕ್ ಚಳವಳಿ ಈ ಸಮಯದಲ್ಲಿ ಉತ್ಕರ್ಷದ ಹಂತದಲ್ಲಿತ್ತು. ಈ ಚಳವಳಿಯು ಕನ್ನಡದ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಾಮುಖ್ಯತೆ ಒತ್ತಿ ಹೇಳಿತು.

**1694:** ಕೇಂದ್ರ ಬ್ಯಾಂಕ್ ಆಫ್ ಇಂಗ್ಲೆಂಡ್ ಸ್ಥಾಪಿತವಾಯಿತು.

**1953:** ಉತ್ತರ ಮತ್ತು ದಕ್ಷಿಣ ಕೊರಿಯಾದ ನಡುವಣ ಯುದ್ಧವು ಅಂತ್ಯವಾಗಿ ಶಾಂತಿ ಒಪ್ಪಂದಕ್ಕೆ ಸಹಿ ಮಾಡಲಾಯಿತು.

### ಜನನ

**1974:** ಇಂಟರ್ನೆಟ್‌ನ ಶ್ರೇಷ್ಠ ಜ್ಞಾನ ಮೂಲವಾದ ವಿಕಿಪೀಡಿಯಾದ ಸಹ ಸ್ಥಾಪಕ ಜಿಮ್ಮಿ ವೇಲ್ಸ್.

**1836:** ಪ್ರಖ್ಯಾತ ಸ್ವಾತಂತ್ರ್ಯ ಹೋರಾಟಗಾರ, ಕ್ರಾಂತಿಕಾರಿ ನಾಯಕ ಚಂದ್ರಶೇಖರ್ ಆಜಾದ್.

**1990:** ಬಾಲಿವುಡ್ ನಟ ಸತ್ಯಜಿತ್ ದತ್ತಾ.

### ಮರಣ

**2002:** ಇಂಗ್ಲಿಷ್ ನಟ ಹಾಗೂ ಡೈರೆಕ್ಟರ್ ಗ್ಯಾರಿ ಡೇವಿಸ್.

**2015:** ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ. ಭಾರತದೆಲ್ಲೆಡೆ ಪ್ರಿಯನಾಗಿದ್ದ ವಿಜ್ಞಾನಿ ಮತ್ತು ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಶಿಲ್ಲಾಂಗ್‌ನಲ್ಲಿ ಉಪನ್ಯಾಸದ ವೇಳೆ ಹೃದಯಾಘಾತದಿಂದ ನಿಧನರಾದರು.

# ಶರೀರಕ್ಕಿಂತ ದೊಡ್ಡ ಆಸ್ತಿ ಮತ್ತೊಂದಿಲ್ಲ

**- ಚೇತನ್ ಗುರೂಜಿ,**
**ಬಸವ ಯೋಗ ಕೇಂದ್ರ, ಅಡಗೂರು**



ಮನುಷ್ಯನಿಗೆ ಸುಖ-ದುಃಖ, ನೋವು-ನಲಿವು, ಬಡತನ-ಸಿರಿತನ, ಹೊಗಳಿಕೆ ತೆಗಳಿಕೆ, ಮಳೆಗಾಲ ಚಳಿಗಾಲ, ಇದ್ದರೆ ಜೀವನ ಸಂತೋಷದಾಯಕವಾಗಿರುತ್ತದೆ. ಇಲ್ಲದಿದ್ದರೆ ಬರೀ ದುಃಖವಿದ್ದರೂ ಆಗುವುದಿಲ್ಲ ನಲಿವಿದ್ದರೂ ಸಾಧ್ಯವಿಲ್ಲ. ಬಡತನವೇ ಹಾಸು ಹೊಕ್ಕಾಗಿದ್ದರು ಚಂದವಿರುವುದಿಲ್ಲ. ಹೊಗಳಿಕೆ ಹೆಚ್ಚಾದರೂ ಕಷ್ಟ. ವರ್ಷಪೂರ್ತಿ ಮಳೆಗಾಲವಿದ್ದರೂ ಬೇಸರವಾಗುತ್ತದೆ. ಹಾಗೆ ಆರೋಗ್ಯದಿಂದಿದ್ದೇನೆ ಎಂದರೂ ಆಗುವುದಿಲ್ಲ. ಅದಕ್ಕಾಗಿಯೇ ಪ್ರಕೃತಿ ನಮಗೆ ನೆಗಡಿ, ತಲೆನೋವು, ಮೈಕೈ ನೋವು, ಜ್ವರ, ಅಜೀರ್ಣ ಆಗಾಗ ಬರುತ್ತಿದ್ದರೆ ನಾವುಗಳು ಕಾಳಜಿಯನ್ನು ವಹಿಸಿ ನಿರೋಗಿಗಳಾಗಿರುವುದಕ್ಕೆ ಎಚ್ಚರಿಕೆಯನ್ನು ವಹಿಸುತ್ತೇವೆ.

### ರೋಗ ಪ್ರಕೃತಿ ರಿಪೇರಿ ಮಾಡುವ ರೀತಿ

ರೇಡಿಯೋ ಕೆಟ್ಟಿತು ರಿಪೇರಿಗೆ ಕೊಡುತ್ತೇವೆ. ಕಾರು ಕೆಟ್ಟಿತು ರಿಪೇರಿ ಮಾಡಿಸುತ್ತೇವೆ, ಟಿವಿ ಕೆಟ್ಟಿತು ಸರಿ ರಿಪೇರಿ. ಹೀಗೆ ಮನುಷ್ಯನು ತಾನು ತಯಾರಿಸಿದ ಎಲ್ಲಾ ಯಂತ್ರಗಳನ್ನು ರಿಪೇರಿ ಮಾಡುತ್ತಾನೆ. ಆದರೆ ಈ ಶರೀರ! ಇದು ಇವನಿಂದ ತಯಾರಿಸಲ್ಪಟ್ಟ ವಸ್ತುವಲ್ಲವಾದ್ದರಿಂದ ಇದರ ರಿಪೇರಿ ಇವನು ಬುದ್ಧಿಗೆ ಎಟುಕುವುದಿಲ್ಲ. ಈ ಶರೀರವನ್ನು ಸೃಷ್ಟಿಸಿದ ಆ ಅದ್ಭುತ, ಅಖಂಡ, ಅನಂತ, ಅಪಾರ ಇತ್ಯಾದಿ ಗುಣವಾಚಕಗಳಿಂದ ಕೂಡಿದ ಆ ಶಕ್ತಿ ಇದರ ರಿಪೇರಿಯನ್ನು ಮರೆಯಿತೆ? ಹಾಗಾಗಲು ಖಂಡಿತ ಸಾಧ್ಯವಿಲ್ಲ.

ಶರೀರಕ್ಕೆ ತನ್ನನ್ನು ತಾನೇ ರಿಪೇರಿ ಮಾಡಿಕೊಳ್ಳುವ ತನ್ನನ್ನು ತಾನೇ ವಾಸಿ ಮಾಡಿಕೊಳ್ಳುವ ತನ್ನನ್ನೇ ತಾನೇ ವಾತಾವರಣಕ್ಕೆ ಹೊಂದಿಸಿಕೊಳ್ಳುವ ಕಲೆಯನ್ನು ಕಲಿಸಿಯೇ ಸೃಷ್ಟಿಸಿದೆ. ಈ ಕ್ರಿಯೆಗಳು ನಮಗೆ ಅರ್ಥವಾಗುವುದರಿಂದ ನಾವು ಅವುಗಳನ್ನೆಲ್ಲ ಸಾರಾಸಗಟಾಗಿ ರೋಗಗಳೆಂದು ನಾಮಕರಣ ಮಾಡಿದ್ದೇವೆ. ಉದಾಹರಣೆಗೆ ಒಂದು ಗಾಯವು ಮಾಯುವ ರೀತಿ ನಮಗೆ ಒಂದು ಗಾಯವಾದ ತಕ್ಷಣ ವೈದ್ಯರನ್ನು ಸಂಪರ್ಕಿಸುತ್ತೇವೆ. ಅವರು ಔಷಧಿ ಹಾಕಿ ಡ್ರೆಸ್ ಮಾಡುತ್ತಾರೆ. ಕೆಲವು ದಿನಗಳಾದ ನಂತರ ಗಾಯ ವಾಸಿಯಾಗುತ್ತದೆ ವೈದ್ಯರು ಮಾಡುವುದಾದರೂ ಏನನ್ನು? ಗಾಯವನ್ನು ಶುಚಿಗೊಳಿಸುವುದು ಕ್ರಿಮಿಗಳು ಸೇರದಂತೆ ರಕ್ಷಣೆ ಕೊಡುವುದು ನೋವು ನಿವಾರಕ ಮದ್ದನ್ನು ನೀಡುವುದು ಒಂದು ಕಾಡಿನಲ್ಲಿ ಹುಲಿಯ ಭಯದಿಂದ ಓಡುತ್ತಿದ್ದ ಜಿಂಕೆಯು ಎಡವಿ ಬಿದ್ದು ಗಾಯ ಮಾಡಿಕೊಂಡಿದೆ ಅದಕ್ಕೆ ಯಾವ ಡಾಕ್ಟರ್.

ಅದು ಸೆಪ್ಟಿಕ್ ಆಗಿ ಸತ್ತು ಹೋಗುತ್ತದೆ ಏನು? ವೈದ್ಯರಿರಲಿ ಬಿಡಲಿ ಔಷಧಿ ಹಾಕಲಿ ಬಿಡಲಿ ವಾಸಿಯಾಗುವ ಕ್ರಿಯೆಯೇ ಬೇರೆ ನೋವು ನಿವಾರಣೆ ಹುಳ ಬೀಳದಂತೆ ತಡೆಯುವಿಕೆ. ಇವೆಲ್ಲ ಬೇರೆ, ಬೇರೆ ಕ್ರಿಯೆಗಳು ವಾಸಿಯಾಗುವ ಕ್ರಿಯೆ ನಿಸರ್ಗದ್ದೇ ಪೇಟೆಂಟ್. ಏಟು ಬಿದ್ದ ತಕ್ಷಣ ಯಾರಿಗೂ ಕಾಯದೆ ಶರೀರ ತನ್ನ ರಿಪೇರಿ ಕೆಲಸವನ್ನು ಪ್ರಾರಂಭಿಸಿ ಬಿಡುತ್ತದೆ. ಒಂದು ನೀರು ತುಂಬಿದ ಮಡಿಕೆಗೆ ಒಂದು ಸಣ್ಣ ತೂತಾಯಿತೆಂದುಕೊಳ್ಳೋಣ. ತಕ್ಷಣ ಅದರಲ್ಲಿರುವ ನೀರೆಲ್ಲ ಹೊರಕ್ಕೆ ಹೋಗಿಬಿಡುತ್ತದೆ. ಕ್ಷೇತ್ರದಲ್ಲಿಯೂ ಹಾಗೆ ಆಗಿದ್ದಿದ್ದರೆ ಒಂದು ಸಣ್ಣ ಗಾಯವಾದ ಕೂಡಲೇ ಶರೀರದ ಎಲ್ಲ ರಕ್ತವು ಹೊರಕ್ಕೆ ಹರಿದು ಹೋಗಿಬಿಡಬೇಕಾಗಿತ್ತು. ಹಾಗಾಗದಂತೆ ತಡೆಯಲು ಮೊದಲು ರಕ್ತವು ಹೆಪ್ಪುಗಟ್ಟುವಂತೆ ಮಾಡುತ್ತದೆ. ರಕ್ತದಲ್ಲಿರುವ ಪ್ಲೇಟ್ ಲೆಟ್ ಎಂಬ ಚಿಕ್ಕ ದುಂಡನೆಯ ರಚನೆಗಳು ಗಾಯವಾದ ಜಾಗದ ಸುತ್ತಲೂ ಅಂಟಿಕೊಳ್ಳುತ್ತವೆ. ಇದರ ಪರಿಣಾಮವಾಗಿ ಗಾಯದ ಸುತ್ತಲೂ ಒಂದು ಆವರಣ ಸೃಷ್ಟಿಯಾಗುತ್ತದೆ. ತಕ್ಷಣವೇ ಏಟು ಬಿದ್ದ ಜೀವಕೋಶಗಳು ಆರೋಗ್ಯಪೂರ್ಣ ಜೀವಕೋಶಗಳಿಂದ ಬೇರ್ಪಡಿಸಲ್ಪಡುತ್ತವೆ. ನಂತರ ಹೊರಗಿನ ಧೂಳು ಕ್ರಿಮಿಕೀಟಗಳು ಗಾಯವನ್ನು ಪ್ರವೇಶಿಸದಂತೆ ಒಂದು ಟೋಪಿನ ಅವಶ್ಯಕತೆ ಇದೆ. ನೆಗಡಿಯಾಯಿತು, ಕೀವು ತುಂಬಿತು, ಜ್ವರ ಬಂದಿತು ನಮಗೆ ಇವೆಲ್ಲ ರೋಗಗಳು, ಆದರೆ ಶರೀರಕ್ಕೆ ತನ್ನನ್ನು ತಾನೇ ರಿಪೇರಿ ಮಾಡಿಕೊಳ್ಳುತ್ತಿರುವ ಪ್ರಕ್ರಿಯೆ




ವಾಸಿ ಮಾಡಿಕೊಳ್ಳುತ್ತಿರುವ ರೀತಿ ಶರೀರಕ್ಕೆ ಬೇಕಿರುವುದಕ್ಕಿಂತ ಹೆಚ್ಚು ಆಹಾರ ಒಳಕ್ಕೆ ಸೇರಿತು. ಬೇಧಿಯ ರೂಪದಲ್ಲಿ ಅದನ್ನು ಹೊರಕ್ಕೆ ಹಾಕಬೇಕು. ಋತು ಬದಲಾವಣೆಯಾಯಿತು. ಅದಕ್ಕನುಗುಣವಾಗಿ ಶರೀರ ಹೊಂದಿಕೊಳ್ಳಬೇಕು. ಆ ಹೊಂದಿಕೊಳ್ಳುತ್ತಿರುವ ಪ್ರಕ್ರಿಯೆ ನಮಗೆ ರೋಗದಂತೆ ಕಾಣುತ್ತದೆ. ಹೊಂದಿಕೊಳ್ಳುವಾಗ ಕಿರಿ ಕಿರಿಯಾಗುತ್ತದಲ್ಲ. ಅದನ್ನು ನಾವು ರೋಗವೆಂದು ಗುರುತಿಸುತ್ತೇವೆ.

ನಿಸರ್ಗ ರಿಪೇರಿ ಮಾಡುವ ರೀತಿ ಅದು ರೋಗವೆಂದು ನಮ್ಮ ಭೀತಿ ಶರೀರದ ಹುಟ್ಟುಗುಣವೇ ರಿಪೇರಿ ಅದನ್ನ ಅರ್ಥ ಮಾಡಿಕೊಳ್ಳುವುದು ಸರಿಯಾದ ದಾರಿ.

### ರೋಗ ಎಚ್ಚರಿಕೆಯ ಗಂಟೆ


ಅರ್ಧ ರಾತ್ರಿಯಲ್ಲಿ ನಾಯಿ ಬೊಗಳುತ್ತದೆ. ಇದರಿಂದ ನಮ್ಮ ನಿದ್ರಾ ನಾಶ, ಅದು ನಮ್ಮ ನಿದ್ರೆಯನ್ನು ತಿಳಿಸಲು ಬೊಗಳುತ್ತದೆಯೊ? ಕಳ್ಳರಿಂದ ನಮ್ಮನ್ನು ಎಚ್ಚರಿಸಲು ಬೊಗಳುತ್ತದೆಯೋ? ಹಾಗೆಯೇ ರೋಗವು ಸಹ ನಮ್ಮನ್ನು ಎಚ್ಚರಿಸುವ ಕರೆಗಂಟೆ ಅದು ಬರುವ ಮುನ್ಸೂಚನೆಯನ್ನು ಸಹ ಕೊಡುತ್ತದೆ. ಇದ್ದಕ್ಕಿದ್ದಂತೆ ಧುಮುಕುವುದಿಲ್ಲ. ಜ್ವರ ಬರುವ ಮೊದಲು ಮೈ ಕೈ ನೋವು ಎಲ್ಲಾ ಬಂದು ನಂತರ ಜ್ವರ ಬರುತ್ತದೆ.

ಕರೆಗಂಟೆಗೆ ಎಚ್ಚೆತ್ತರೆ ರೋಗ ಮುಂದುವರಿಯುವುದಿಲ್ಲ. ರೋಗ ಎಚ್ಚರಿಕೆಯ ಗಂಟೆ ನೀ ಅಂದುಕೊಂಡಿಹೆ ಅದು ಮಾಡುತ್ತಿಹುದು ತಂಟೆ. ಎಚ್ಚೆತ್ತುಕೊಂಡರಿಲ್ಲ ಭಯ ಅರ್ಥಮಾಡಿಕೋ ಅದು ಪ್ರಕೃತಿಯ ದಯ. ನಿಸರ್ಗವು ನಿಯಮಗಳಿಗೆ ಬದ್ಧವಾಗಿದೆ ಆ ನಿಯಮವನ್ನು ಮೀರಿದರೆ ಅದು ವ್ಯಕ್ತಿಯ ಅಂತಸ್ತು ಹಣ ಯಾವುದನ್ನು ನೋಡದೆ ಶಿಕ್ಷಿಸುತ್ತದೆ. ಉದಾಹರಣೆಗೆ ಸುಡುವುದು ಬೆಂಕಿಯ ಗುಣ ಯಾರೇ ಆಗಲಿ ಬೆಂಕಿಯನ್ನು ಮುಟ್ಟಿದರೆ ಅದು ಸುಟ್ಟೇ ಸುಡುತ್ತದೆ. ಮತ್ತೊಂದು ಉದಾಹರಣೆ ಕಣ್ಣುಗಳು ಸೃಷ್ಟಿಸಲ್ಪಟ್ಟಿರುವುದು ವಸ್ತುಗಳನ್ನು ನೋಡಲು ಆದರೆ ಮನುಷ್ಯ ಅದನ್ನು ಟಿವಿ ಮೊಬೈಲ್, ಇಂಟರ್ನೆಟ್ ಎಲ್ಲಾ ನೋಡಲು ಬಳಸುತ್ತಾನೆ. ನಿಸರ್ಗ ಒಂದು ಮಾರ್ಜಿನ್ ಬಿಟ್ಟಿರುತ್ತದೆ. ಆ ಲಕ್ಷ್ಮಣ ರೇಖೆಯನ್ನು ಮೀರಿದರೆ ಶಿಕ್ಷಿಸುತ್ತದೆ. ಪ್ರತಿಯೊಂದು ರೋಗದ ಹಿಂದೆಯೂ ನಾವು ನಿಸರ್ಗದ ನಿಯಮವನ್ನು ಮೀರಿದ ಕುರುಹು ಇದ್ದೇ ಇರುತ್ತದೆ. ಅದು ಮೊದಲು ಸಣ್ಣಪುಟ್ಟ ಶಿಕ್ಷೆಗಳನ್ನು ಕೊಡುತ್ತದೆ. ಅದಕ್ಕೆ ಎಚ್ಚೆತ್ತುಕೊಳ್ಳುತ್ತಿದ್ದರೆ ಶಿಕ್ಷೆಯ ಮೊತ್ತವು ಹೆಚ್ಚುತ್ತಾ ಹೋಗುತ್ತದೆ.

### ರೋಗ ಪ್ರಕೃತಿ ಶುಚಿ ಮಾಡುವ ಪ್ರಕ್ರಿಯೆ

ಮನುಷ್ಯನ ಶರೀರ ಕೋಟ್ಯಾಂತರ ಜೀವಕೋಶಗಳ ಜಾಲ ಒಂದೊಂದು ಜೀವಕೋಶವು ಒಂದೊಂದು ಬೇರೆ ಬೇರೆ ಕಾರ್ಖಾನೆಗಳಂತೆ ಕೆಲಸ ಮಾಡುತ್ತದೆ. ಪ್ರತಿಯೊಂದು ಜೀವಕೋಶವು ಆಹಾರವನ್ನು ರಕ್ತ ಮತ್ತು ಇತರ ಜೀವರಸಗಳಿಂದ ಪಡೆಯುತ್ತದೆ. ಆಹಾರವನ್ನು ತೆಗೆದುಕೊಳ್ಳುವಿಕೆ ಉಸಿರಾಡುವಿಕೆ ಹೊರಗಿನ ಉಷ್ಣ ಶೀತಗಳೊಡನೆ ಹೊಂದಾಣಿಕೆ. ಅಲ್ಲದೆ ವಹಿಸಿದ ವಿಶಿಷ್ಟ ಕೆಲಸದ ನಿರ್ವಹಣೆ ಈ ಕಾರ್ಯಗಳಿಂದ ಬಳಲಿದ ಜೀವಕೋಶ ವಿಷ ರೂಪದ ಉಪಪದಾರ್ಥಗಳನ್ನು ಬಿಡುಗಡೆ ಮಾಡುತ್ತದೆ. ಅವು ಶರೀರದಿಂದ ಹೊರದೂಡಲ್ಪಡಬೇಕು.

ಅದಕ್ಕಾಗಿ ಕೆಲವು ಅಂಗಗಳಿವೆ. ಅವು ಸಮರ್ಪಕವಾಗಿ ಕೆಲಸ ಮಾಡದಿದ್ದರೆ ಆ ಉಪ ಪದಾರ್ಥಗಳು ಜೀವಕೋಶದಲ್ಲಿಯೇ ಉಳಿಯುತ್ತವೆ. ಈ ವಿಷ ವಸ್ತು ಹೆಚ್ಚಿದ್ದಲ್ಲಿ ಜೀವಕೋಶಕ್ಕೆ ಸಾವು ಬರುತ್ತದೆ. ಸತ್ತ ಜೀವಕೋಶ ಹೊರದೂಡಲ್ಪಡಬೇಕು. ವಿಸರ್ಜನ ಕ್ರಿಯೆಯ ವ್ಯತ್ಯಯದಿಂದ ಸತ್ತ ಜೀವಕೋಶವೂ ಸಹ ಶರೀರದಲ್ಲಿಯೇ ಉಳಿಯುತ್ತದೆ. ಜೊತೆಗೆ ಪಕ್ಕದ ಜೀವಕೋಶದ ಶಕ್ತಿಯನ್ನು ಕುಂದಿಸುತ್ತದೆ ಕಡೆಗೆ ಅದರ ಸಾವು. ಇದೇ ಸರಪಣಿ ಮುಂದುವರೆಯುತ್ತದೆ. ಜೀವಕೋಶದ ಸಮೂಹವೇ ಊತಕಗಳು, ಊತಕಗಳು ಕೂಡಿ ಅಂಗಾಂಗಗಳು, ಅಂಗಾಂಗಗಳೆಲ್ಲ ಸೇರಿ ಶರೀರ, ಆದ್ದರಿಂದ ಒಂದು ಜೀವಕೋಶದಲ್ಲಿ ಉಳಿದ ಕೊಳೆಯು ಶರೀರದಲ್ಲಿ ಉಳಿಯುವ ಮಲವಾಗಿ ಮಾರ್ಪಡುತ್ತದೆ. ಈ ಕೊಳೆಯೂ ವಿಷಯುಕ್ತವಾದದ್ದು ಹಾಗೂ ಕೆರಳಿಸುವ ಗುಣವುಳ್ಳದ್ದು. ಇದನ್ನು ಹೊರದೂಡುವುದು ಆಹಾರವನ್ನು ಒದಗಿಸುವುದಕ್ಕಿಂತ ಮುಖ್ಯ ಕೆಲಸವೆಂಬುದು ಸತ್ಯ. ಶರೀರದಲ್ಲಿ ತಯಾರಾದ ಕೊಳೆಯು ತಕ್ಷಣ ಹೊರಕ್ಕೆ ಹಾಕುವ ವ್ಯವಸ್ಥೆ ಇಲ್ಲವೇ? ಖಂಡಿತ ಇದೆ ಅದು



ಯಾವುದು? ಸುದ್ದಿಕರಣಾಂಗಗಳು ದೊಡ್ಡ ಕರುಳು ಶ್ವಾಸಕೋಶ ಮೂತ್ರ ಜನಕಾಂಗ ಮತ್ತು ಚರ್ಮ ಇವೆಲ್ಲದೆ ವಿಷ ವಸ್ತುಗಳನ್ನು ಪರಿವರ್ತಿಸುವ ಅಂಗವಾದ ಲಿವರ್ ಇದೆ. ಹೀಗೆ ನಿಸರ್ಗ ಅನೇಕ ರೀತಿಯಲ್ಲಿ ಶರೀರವನ್ನು ಸರಿಪಡಿಸಲು ಅಂದರೆ ಆರೋಗ್ಯವಾಗಿಡಲು ಸದಾ ಕೆಲಸ ಮಾಡುತ್ತಿರುತ್ತದೆ. ದೇವರು ಕೊಟ್ಟಿರುವಂಥ ಇಂತಹ ಅದ್ಭುತ ದೇಹವನ್ನು ನೂರು ವರ್ಷಗಳ ಕಾಲ ಜೋಪಾನವಾಗಿ ಕಾಪಾಡಿಕೊಳ್ಳುವುದು ನಮ್ಮ ಧರ್ಮ.

ಆದರೆ ನಾವು ನಿರ್ಲಕ್ಷಿಸಿ ಹೊರಗಿನ ಪ್ರಪಂಚಕ್ಕೆ ಆಸೆ ಆಕಾಂಕ್ಷೆಗಳ ಈಡೇರಿಕೆಯ ಹಿಂದೆ ಹೋಗುತ್ತೇವೆ ಹೊರತು ಈ ಶರೀರವೇ ದೊಡ್ಡ ಆಸ್ತಿ ಎಂಬ ಅರಿವು ಬೇಗ ಬಂದರೆ ಒಳ್ಳೆಯದು. ಆದರೆ ಗಮನಿಸುವ ಸಮಯ ಎಲ್ಲಿದೆ ಎಂದು ಹೇಳುವ ಜನರಿಗಾಗಿಯೇ ಶರಣೆ ಅಕ್ಕಮಹಾದೇವಿಯವರು 12ನೇ ಶತಮಾನದಲ್ಲಿಯೇ ಒಂದು ವಚನದಲ್ಲಿ ತಿಳಿಸಿದ್ದಾರೆ.

ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು
ಆಗಸ ನೀರೊಳಗಿದ್ದು ಬಾಯಾರಿ ಸತ್ತಂತೆ
ಮನ ಬಂದುದ ಬಯಸಿ ಬೇವುತ್ತಿದ್ದನಯ್ಯ
ಎನ್ನ ಮನದ ದುರಾಸೆಯ ಮಣಿಸಿ ನಿಮ್ಮತ್ತತೋರ ಚೆನ್ನಮಲ್ಲಿಕಾರ್ಜುನ

ಅಂದರೆ ಹಗಲಿನ ಸಮಯ ಆಸೆ ಆಕಾಂಕ್ಷೆಗಳ ಈಡೇರಿಸುವುದಕೋಸ್ಕರ ದುಡಿಮೆ ಮಾಡುತ್ತೇವೆ. ರಾತ್ರಿ ವೇಳೆ ವಿಶ್ರಾಂತಿ ನಿದ್ದೆಗಾಗಿ ಅಲ್ಲದೆ ಮೊಬೈಲ್ ಟಿವಿ ನೋಡುವುದರಲ್ಲಿ ಸಮಯ ಕಳೆಯುತ್ತೇವೆ.

ಬಟ್ಟೆ ತೊಳೆಯುವ ಅಗಸ ಬಾಯಾರಿಕೆಯಾದರು ಮುಂದೆ ಇರುವ ನೀರನ್ನು ಕುಡಿಯದೆ ಬರೀ ಬಟ್ಟೆ ತೊಳೆಯುವುದರಲ್ಲಿ ಮಗ್ನನಾಗಿ ಬಾಯಾರಿಕೆಯಿಂದ ಸತ್ತಂತೆ ನಮ್ಮ ಕಣ್ಮುಂದೆ ಇರುವ ನಿಸರ್ಗ ದೇವತೆಯನ್ನು ಸರಿಯಾಗಿ ಬಳಸಿಕೊಳ್ಳದೆ ಅನಾರೋಗ್ಯರಾಗಿ ನಾವುಗಳು ಒದ್ದಾಡುತ್ತಿರುವುದನ್ನು ನೋಡಿದರೆ ಕೈಯಲ್ಲಿ ಬೆಣ್ಣೆ ಹಿಡಿದುಕೊಂಡು ಬೆಟ್ಟ ಸುತ್ತಿದಂತೆ ನಮ್ಮೆಲ್ಲರ ಆರೋಗ್ಯದ ಕ್ಷೇತ್ರದಲ್ಲಿ ಆಗಿರುವುದು ಇದೆಯಲ್ಲವೇ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248